ಇದು ತೊಟ್ಟಿಯಾಗಿ ಬದಲಾಗೋವಾಗ ಕೆಲಸ ಮುಗಿಯುತ್ತೆ" ಎಂದು ಗಡ್ಡವನ್ನೂ ಸವರುತ್ತ ಅವರು ಹೇಳಿದರು.

"ನಮ್ಮ ಅತ್ತೆ ಹತ್ರ ಇದೇ ಥರಾ ಒಂದು ದೊಡ್ಡ ಮರದ ಪೆಟ್ಟಿಗೆ ಇದೆ. ದೀಪಾವಳಿ, ಸಂಕ್ರಾಂತಿಗೆ ತಗೊಳೋ ಸೀರೆ ಎಲ್ಲಾ ಅದರೊಳಗೆ ಇಟ್ಟಿರ್ತಾರೆ" ಎಂದು ತಕ್ಷಣ ನೆನಪಿಗೆ ಬಂದದ್ದನ್ನು ಅವರ ಬಳಿ ಹೇಳಿದೆ. "ಹಾಗಾ?" ಎಂದು ಆಶ್ಚರ್ಯದಿಂದ ಕೇಳಿದರು ಅವರು. "ತೆರೆಯೋವಾಗ ಕರ್ಪೂರದ ವಾಸನೆ ಬರುತ್ತೆ" ಎಂದೆ ನಾನು.

ಕೆಲವು ಕ್ಷಣಗಳ ನಂತರ "ಚಿಕ್ಕ ಬುದ್ಧಿಯವರಿಗೆ ಮೇಷ್ಟ್ರೋ, ಮೇಡಮ್ಮೋ? ಯಾರು ಪಾಠ ಹೇಳ್ಕೊಡೋದು?" ಎಂದು ಕೇಳಿದರು. ನಂತರ, ನನ್ನ ಮುಖವನ್ನು ಒಮ್ಮೆ ತಿರುಗಿನೋಡಿ ಉಳಿಯಿಂದ ಕಲ್ಲಿನ ತುದಿಗಳಲ್ಲಿ ಚಾಚಿಕೊಂಡಿದ್ದ ಸಣ್ಣಪುಟ್ಟ ಕಲ್ಲುಗಳನ್ನು ಕೆತ್ತಿ ತೆಗೆದರು.

"ತಮಿಳು, ಇಂಗ್ಲಿಷ್, ಚರಿತ್ರೆ, ಭೂಗೋಳಕ್ಕೆಲ್ಲಾ ಮೇಷ್ಟ್ರು ಬರ್ತಾರೆ. ಉಳಿದದ್ದಕ್ಕೆ ಮೇಡಂ ಬರ್ತಾರೆ.''

